**ದಿನಾಂಕಃ 18/10/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆಃ** ಮಾನ್ಯ **ಸಸಅ ರಿಂದಃ**

3. ಮಹಜರ್ ಕ್ರಮವನ್ನು ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆಯವರೆಗೆ ನಡೆಸಿರುತ್ತೇವೆ. ಮಹಜರ್ ಮಾಡಿದ ಸ್ಥಳದಲ್ಲಿ ಕಲ್ಲು ಕ್ವಾರೆ ಇತ್ತು, ಕಲ್ಲುಗಳನ್ನು ಪುಡಿಮಾಡುವ ಕ್ರಷರ್ ಇತ್ತು. ಮಹಜರ್ ಮಾಡಿದ ನಂತರ ಫ್ರಾಸಾ-1 ರವರು ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿದರು. ನಂತರ ಫ್ರಾಸಾ-1 ರವರು ಕಲ್ಲುಪುಡಿ, ಕ್ರಷರ್ ಸಾಮಗ್ರಿಗಳನ್ನು ವಶಕ್ಕೆ ಪಡೆದುಕೊಂಡರು. ಸಾಕ್ಷಿಯು ನಿಪಿ.2-ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿ.ಪಿ.2(ಬಿ)** ಎಂದು ಗುರುತಿಸಲಾಯಿತು. ಮತ್ತೇ ಏನೂ ಮಾಡಲಿಲ್ಲ. ಪೊಲೀಸರಿಗೆ ನಾನು ಈ ವಿಚಾರವಾಗಿ ಏನನ್ನು ಹೇಳಲಿಲ್ಲ.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

4. ನಾನು ಪೊಲೀಸರಿಗೆ ಘಟನೆಯ ಬಗ್ಗೆ ಮತ್ತು ಮಹಜರ್ ಮಾಡಿದ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಕ್ರಷರ್ ಸಾಮಗ್ರಿಗಳನ್ನು ಮತ್ತು ಕಲ್ಲುಪುಡಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎಂ.ವಿ.ಆರ್. ವಕೀಲರಿಂದಃ**

5. 2004 ನೇ ಸಾಲಿನಲ್ಲಿ ನಾನು ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸಕ್ಕೆ ಸೇರಿಕೊಂಡೆ. ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಪಿ.ಯು.ಸಿ ಅನುತ್ತೀರ್ಣನಾಗಿದ್ದೇನೆ. ನಾನು ಕೆಲಸಕ್ಕೆ ಸೇರಿದ ದಿನದಿಂದಲೂ ಘಟನೆ ನಡೆಯುವ ದಿನದವರೆಗೂ ಚನ್ನಕಲ್ಲು ಕಾವಲು ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸ

ನಿರ್ವಹಿಸಿರುತ್ತೇನೆ. ಚನ್ನಕಲ್ಲು ಕಾವಲು ಗ್ರಾಮದ ಸರ್ವೆ ನಂಬರ್ 30 ರಲ್ಲಿ 4500 ಎಕರೆ ಜಮೀನು ಇದೆ. 4500 ಎಕರೆ ಸಹ ಗೋಮಾಳದ ಜಮೀನು. ಘಟನಾ ಸ್ಥಳಕ್ಕೂ ಮತ್ತು ಚನ್ನಕಲ್ಲು ಕಾವಲು ಗ್ರಾಮಕ್ಕೂ ಸುಮಾರು 500 ಮೀಟರ್ ಅಂತರ ಇದೆ. ಸರ್ವೆ ನಂಬರ್ 30 ಕ್ಕೂ ಹುಣಸೂರು ಮುಖ್ಯ ರಸ್ತೆಗೂ 4 ಕಿ.ಮೀ. ಅಂತರ ಇದೆ. ಸರ್ವೆ ನಂಬರ್ 30 ಕ್ಕೂ ಮುತ್ತಿನ ಮುಳ್ಳಸೋಗೆ ಗ್ರಾಮಕ್ಕೂ ಒಂದೂವರೆ ಕಿ.ಮೀ. ಅಂತರ ಇದೆ. ಗೋಮಾಳದ ಜಮೀನಿನಲ್ಲಿ ಇಲ್ಲಿಯವರೆಗೂ ಯಾವುದೇ ಪರವಾನಿಗೆಯನ್ನು ಪಡೆದು ಕಲ್ಲು ಕ್ವಾರೆ ಕೆಲಸ ನಡೆಯುತ್ತಿಲ್ಲ.

6. 2003 ರಿಂದ 2008 ರವರೆಗೆ ಸರ್ವೆ ನಂಬರ್ 30 ರಲ್ಲಿ ಜಬೀತ್.ಕೆ.ಟಿ ಎಂಬುವವರಿಗೆ ಕಲ್ಲು ಕ್ವಾರೆ ಮತ್ತು ಕಲ್ಲು ಕ್ರಷರ್ ಮಾಡಲು ಪರವಾನಿಗೆ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಜಬೀತ್.ಕೆ.ಟಿ ರವರು 2013 ರವರೆಗೂ ಸದರಿ ಜಾಗದಲ್ಲಿ ಕಲ್ಲು ಕ್ವಾರೆ ಮಾಡಲು ಪರವಾನಿಗೆಯನ್ನು ನವೀಕರಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರ ಪರವಾನಿಗೆಯನ್ನು ನವೀಕರಿಸಲು ನಾನೇ NOC ಕೊಟ್ಟಿದ್ದೆ, ಆದ್ದರಿಂದ ಹಿರಿಯ ಭೂ ವಿಜ್ಞಾನ ತಜ್ಞರು ಸದರಿ ಜಬೀತ್.ಕೆ.ಟಿ ರವರಿಗೆ ಕ್ವಾರೆ ಮಾಡಲು ಪರವಾನಿಗೆಯನ್ನು ನವೀಕರಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ತಾಲ್ಲೂಕು ಕಚೇರಿಯಲ್ಲಿ ಅರ್ಜಿಯನ್ನು ಕೊಟ್ಟು ಪರವಾನಿಗೆ ನವೀಕರಿಸಿರಬಹುದು ಎಂದು ನುಡಿಯುತ್ತಾರೆ. ಹಿರಿಯ ಅಧಿಕಾರಿಗಳು ಪರವಾನಿಗೆ ಕೊಡಬೇಕಾದರೆ ಸ್ಥಳೀಯ ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ರಾಜಸ್ವ ನಿರೀಕ್ಷಕರ ರವರಿಂದ ಮಾಹಿತಿ ಪಡೆಯುತ್ತಾರೆ ಎಂದರೆ ಸರಿ. 2004 ರಿಂದ ಘಟನೆ ಆಗುವ ದಿನದವರೆಗೂ ಘಟನಾ ಸ್ಥಳದಲ್ಲಿ ಜಬೀತ್.ಕೆ.ಟಿ ರವರು ಕಲ್ಲು ಗಣಿಗಾರಿಕೆ ಮತ್ತು ಕ್ರಷರ್ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 2004 ರಿಂದ 2013 ರವರೆಗೆ ಕಲ್ಲು ಗಣಿಗಾರಿಕೆ ಮತ್ತು ಕ್ರಷರ್ ಕೆಲಸ ನಡೆಯುತ್ತಿತ್ತು. ಯಾರು ಗಣಿಗಾರಿಕೆ ಮಾಡುತ್ತಾರೋ ಅವರು ಸರ್ಕಾರಕ್ಕೆ ರಾಜಧನ ಕಟ್ಟಬೇಕು ಎಂದರೆ ಸರಿ. ರಾಜಧನವನ್ನು ನಮ್ಮ ಮುಖಾಂತರ ಗಣಿಗಾರಿಕೆ ಇಲಾಖೆಗೆ ಕಟ್ಟಬೇಕು ಎಂದರೆ ಸರಿಯಲ್ಲ. ನಾನು ಕೆಲಸಕ್ಕೆ ಸೇರಿದ ನಂತರ ಸದರಿ ಜಾಗದ ಕಲ್ಲು ಗಣಿಗಾರಿಕೆ ಮತ್ತು ಕ್ರಷರ್ ನ ಮಾಲೀಕರು ಯಾರು

ಎಂದು ತಿಳಿದುಕೊಂಡಿರುತ್ತೇನೆ, ಆದರೆ ಅವರನ್ನು ನೋಡಿಲ್ಲ. ಅದರ ಮಾಲೀಕರ ಹೆಸರು ಜಬೀತ್ ಎಂದು ಗೊತ್ತಾಯಿತು. ಜಬೀತ್.ಕೆ.ಟಿ ರವರಿಗೆ ಎಲ್ಲಿಯವರೆಗೆ ಪರವಾನಿಗೆ ಇತ್ತು ಎಂದು ನಾನು ದಾಖಲೆಯನ್ನು ನೋಡಿಲ್ಲ. ಜಬೀತ್.ಕೆ.ಟಿ ರವರು ಎಷ್ಟು ಮೆಟ್ರಿಕ್ ಟನ್ ಕಲ್ಲು ಗಣಿಕಾರಿಗೆ ಮಾಡಿದ್ದಾರೆಂದು ನಾನು ದಾಖಲಾತಿಯನ್ನು ನೋಡಿಲ್ಲ.

7. ನಾನು ದಿನಚರಿಯನ್ನು ನಿರ್ವಹಿಸಬೇಕು ಎಂದರೆ ಸರಿ. ಸರ್ಕಾರದಿಂದ ಗಣಿಕಾರಿಕೆ ಪರವಾನಿಗೆ ಕೊಟ್ಟ ಮೇಲೆ ವಾರಕ್ಕೆ ಒಂದು ದಿನ ಸದರಿ ಸ್ಥಳಕ್ಕೆ ಬೇಟಿ ಕೊಡಬೇಕು ಎಂದರೆ ಸರಿ. ಆ ರೀತಿ ಬೇಟಿ ಕೊಟ್ಟಾಗ ಎಷ್ಟು ಕಲ್ಲು ಗಣಿಕಾರಿಕೆ ಮಾಡಿದ್ದಾರೆ ಮತ್ತು ಎಷ್ಟು ಕೆಲಸಗಾರರು ಇದ್ದಾರೆಂದು ನಮೂದಿಸಬೇಕು ಎಂದರೆ ಸರಿಯಲ್ಲ. ನನ್ನ ದಿನಚರಿಯಲ್ಲಿ ಕಲ್ಲುಗಣಿಗಾರಿಕೆ ಮತ್ತು ಕ್ರಷರ್ ವಿದ್ಯುಶ್ಚಕ್ತಿಯಿಂದ ಅಥವಾ ಡೀಸೆಲ್ ಉಪಯೋಗದಿಂದ ಚಾಲನೆಯಾಗುತ್ತಿತ್ತಾ ಎಂಬ ಬಗ್ಗೆ ನಮೂದಿಸಿಲ್ಲ. ಜಬೀತ್.ಕೆ.ಟಿ ರವರು ಸದರಿ ಗಣಿಗಾರಿಕೆಗೆ ವಿದ್ಯುತ್ ಸ್ಥಾವರನ್ನು ಪಡೆಯಲು ನಾನು NOC ಯನ್ನು ಕೊಟ್ಟಿರಲಿಲ್ಲ. ಜಬೀತ್.ಕೆ.ಟಿ ರವರು ಗಣಿಗಾರಿಕೆ ನಿಲ್ಲಿಸಿದ ಬಗ್ಗೆ ಹಿರಿಯ ಅಧಿಕಾರಿಗಳಿಗೆ ವರದಿ ನೀಡಿಲ್ಲ, ಆದರೆ ಅವರು ಗಣಿಗಾರಿಕೆ ನಡೆಸುತ್ತಿದ್ದ ಬಗ್ಗೆ ವರದಿ ನೀಡಿದ್ದೇನೆ. ಜಬೀತ್.ಕೆ.ಟಿ ರವರು ಯಾವಾಗ ಗಣಿಗಾರಿಕೆ ನಿಲ್ಲಿಸಿದರು ಎಂದು ನನಗೆ ಗೊತ್ತಿಲ್ಲ. ಜಬೀತ್.ಕೆ.ಟಿ ರವರು ಗಣಿಗಾರಿಕೆ ಮತ್ತು ಕ್ರಷರನ್ನು ನಿಲ್ಲಿಸಿದ ಬಗ್ಗೆ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿಲ್ಲ.

8. ದಾಳಿಯಾಗುವ ಹಿಂದಿನ ದಿನ ಕ್ರಷರ್ ಜಾಗಕ್ಕೆ ಬೇಟಿ ಕೊಟ್ಟಿದ್ದೆ. ನಾನು ಬೇಟಿ ಕೊಟ್ಟಾಗ ಸದರಿ ಕ್ರಷರ್ ಚಾಲನಾ ಸ್ಥಿತಿಯಲ್ಲಿತ್ತು. ಆಗ 4 ಜನ ಕೆಲಸಗಾರರು ಇದ್ದರು. ಆ ಸಮಯಕ್ಕೆ ಅವರು ಕೆಲಸ ಮಾಡುವುದು ಬಿಟ್ಟು ಬೇರೆ ಯಾವುದೇ ಕೆಲಸ ನಡೆಯುತ್ತಿರಲಿಲ್ಲ. ನಾನು ಬೇಟಿ ಕೊಟ್ಟಾಗ ಕ್ರಷರ್ ವಿದ್ಯುತ್ಶ್ಚಕ್ತಿಯಿಂದ ಚಾಲನೆಯಾಗುತ್ತಿತ್ತು.

9. ದಾಳಿ ನಡೆದ ಒಂದು ವಾರದ ಹಿಂದಿನಿಂದ ಆರೋಪಿತ ಕ್ರಷರ್ ನಡೆಸುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ಮಾಹಿತಿ ಬಂದ ನಂತರ ಆರೋಪಿತ ಅಕ್ರಮವಾಗಿ ಕ್ರಷರ್

ನಡೆಸುತ್ತಿದ್ದಾರೆ ಎಂದು ಲಿಖಿತ ರೂಪದಲ್ಲಿ ಮೇಲಾಧಿಕಾರಿಗಳಿಗೆ ತಿಳಿಸಿಲ್ಲ. ಆರೋಪಿತನಿಗೆ ಅಕ್ರಮ ಕ್ರಷರ್ ನ್ನು ನಿಲ್ಲಿಸಲು ಲಿಖಿತ ನೋಟೀಸನ್ನು ನೀಡಿಲ್ಲ. ಆರೋಪಿತ ಅಕ್ರಮ ಕ್ರಷರ್ ನಡೆಸುತ್ತಿದ್ದಾರೆಂದು ನಾನು ಬೆಟ್ಟದಪುರ ಪೊಲೀಸ್ ಠಾಣೆಗೆ ದೂರನ್ನು ನೀಡಿಲ್ಲ. ಕ್ರಷರನ್ನು ನಿರ್ಮಿಸಲು ಸುಮಾರು 6 ತಿಂಗಳ ಕಾಲವಕಾಶ ಬೇಕಾಗುತ್ತದೆ ಎಂದರೆ ಸರಿ. ಸರ್ವೆ ನಂಬರ್ 30 ಕ್ಕೆ ಚನ್ನಕಲ್ಲು ಕಾವಲ್ ಗ್ರಾಮದ ಮುಖಾಂತರ ಹೋಗಬೇಕು ಎಂದರೆ ಸರಿಯಲ್ಲ. ಆವರ್ತಿ ಗ್ರಾಮದಿಂದ ಸರ್ವೆ ನಂಬರ್ 30 ಕ್ಕೆ ಹೋಗಬಹುದು. ಅವರ್ತಿ ಗ್ರಾಮದಿಂದ ಸರ್ವೆ ನಂಬರ್ 30 ಕ್ಕೆ ಹೋಗುವ ದಾರಿ ಇಲ್ಲ, ಚನ್ನಕಲ್ಲು ಕಾವಲ್ ಗ್ರಾಮದ ದಾರಿ ಮುಖೇನ ಹೋಗಬೇಕು ಎಂದರೆ ಸರಿಯಲ್ಲ.

10. 2014 ರಲ್ಲಿ ಸರ್ವೆ ನಂಬರ್ 30 ರಲ್ಲಿ ಹೊಸದಾಗಿ ಕ್ರಷರ್ ಗೆ ಸಂಬಂಧಿಸಿದ ಕೆಲಸ ನಡೆದಿದ್ದು ನನಗೆ ಮಾಹಿತಿ ಇಲ್ಲ. ದಾಳಿ ಸಮಯದಲ್ಲಿದ್ದ ಕ್ರಷರ್ ಜಬೀತ್ ರವರಿಗೆ ಸೇರಿದ್ದು. ಸರ್ವೆ ನಂಬರ್ 30 ರಲ್ಲಿ ಆರೋಪಿತನಿಗೆ ಸೇರಿದ ಕ್ರಷರ್ ಇರಲಿಲ್ಲ ಎಂದರೆ ಸರಿ. ಮಹಜರ್ ನಲ್ಲಿ ಹೇಳಿದ ಗಣಿಗಾರಿಕೆಯ ಆಳ ಮತ್ತು ಅಗಲ ಜಬೀತ್ ರವರ ಅವಧಿಯಲ್ಲಿ ನಡೆದ ಗಣಿಕಾರಿಗೆ ಎಂದರೆ ಸರಿ.

11. ದಿಃ12/09/2014 ರಂದು ಮೇಲಾಧಿಕಾರಿಗಳು ಮತ್ತು ಟಾಸ್ಕ ಪೋರ್ಸ್ ನವರು ದಾಳಿ ಮಾಡಲು ಬಂದಾಗ ನನಗೆ ಲಿಖಿತ ನೋಟೀಸು ನೀಡಿರಲಿಲ್ಲ, ಆದರೆ ಮೌಖಿಕವಾಗಿ ತಿಳಿಸಿದ್ದರು. ದಾಳಿ ಸಮಯದಲ್ಲಿ ಪೋಟೋ ತೆಗೆಸಿದಾಗ ನಾನು ಹಾಜರಿರಲಿಲ್ಲ. ದಾಳಿ ಮಾಡಿದ ದಿನ ಕೆಲಸಗಾರರು ಯಾರೂ ಇರಲಿಲ್ಲ. ಆ ಸಮಯಕ್ಕೆ ಜೆಸಿಬಿ ವಾಹನ ಇತ್ತು. ಮೇಲಾಧಿಕಾರಿಗಳು ಸದರಿ ಜೆಸಿಬಿಯನ್ನು ಅಮಾನತ್ತು ಪಡಿಸಿಕೊಂಡರು. ಜೆಸಿಬಿ ವಾಹನದ ಸಂಖ್ಯೆ ಗೊತ್ತಿಲ್ಲ. ಮಹಜರ್ ಮಾಡಿದ ನಂತರ ನಾನು ಠಾಣೆಗೆ ಹೋಗಿ ದೂರನ್ನು ಕೊಟ್ಟಿಲ್ಲ. ಮಹಜರ್ ಗೆ ಸ್ಥಳೀಕರ ಸಹಿ ಪಡೆದಿದ್ದಾರೆ, ಸ್ಥಳೀಕರ ಹೆಸರು ನನಗೆ ಗೊತ್ತಿಲ್ಲ. ಕ್ರಷರ್ ನಡೆಯುವ ಸ್ಥಳದಲ್ಲಿ 3 ಚಾಲಿತ ಮೋಟರ್ ಗಳು ಇದ್ದವು. ನಮ್ಮ ಹಿರಿಯ ಅಧಿಕಾರಿಗಳು ಸದರಿ 3 ಮೋಟಾರ್ ಗಳನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿಲ್ಲ. ಮಹಜರ್ ನಲ್ಲಿ ಸದರಿ ಮೋಟಾರ್ ಗೆ ಸಂಬಂಧಿಸಿದಂತೆ ನಮೂದಿಸಿಲ್ಲ.

(ಮುಂದುವರೆದ ಪಾಟೀಸವಾಲನ್ನು ಆರೋಪಿತರ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**